## *(iii)*

ಎಂಥದೇ ಸುಖದಲ್ಲಿಯೂ, ಗಕ್ಕನೆ ಗುಂಡಿಗೆ ಜರೆಯಿಸಬಲ್ಲ ಮೊಮೆಂಟಿರುವುದಷ್ಟೆ? ಪರ್ವತದ ಉತ್ತುಂಗವಾದರೂ ಪ್ರಪಾತವಿರದುಂಟೆ? ಅಥವಾ, ಜಯಂಟ್‌ವೀಲ್‌ನಲ್ಲಿ ಬೀಗಿತೂಗುವ ತೊಟ್ಟಿಲಿನಲ್ಲಾದರೂ ಎದೆ ನಡುಗಿಸುವಂತಹ ಒಂದು ಗಳಿಗೆಯಿದೆಯಷ್ಟೆ?

ಇಂಥದೊಂದು ಹೊತ್ತು ಮತ್ತು ಗೊತ್ತು, ಬಲು ಅನಾಮತ್ತಾಗಿ ಇವೊತ್ತು ಉಂಟಾಗಿಬಂತು!

ಮಧ್ಯಾಹ್ನ ಮೂರರ ಸುಮಾರಿಗೊಂದು ಮೀಟಿಂಗ್ ಮುಗಿಸಿ, ಆಫೀಸಿನ ಕಡೆ ಕಾರು ಹೊರಳಿಸಿದ್ದೆನಷ್ಟೆ – ಆದ್ರಾ್ರಳ ಮೆಸೇಜು ಬಂತು. ವಾಟ್ಸ್‌ಆ್ಯಪು... 'ಸರ್‌ಪ್ರೈಸ್! ನಾನು ನಿನ್ನ ಊರಲ್ಲಿದ್ದೀನಿ... ಕೆನ್ ವಿ ಮೀಟ್ ಅಪ್?'

ಅಚ್ಚರಿ ಹುಟ್ಟದೆಯೆ ಬಾಂಬು ಸಿಡಿದಂತಾಯಿತು!

ನಂಬಲಾಗಲಿಲ್ಲ. ಖುಷಿಯ ವಿಷಯವೆಂತಲೂ ಅನಿಸಲಿಲ್ಲ.

ನಿಜಕ್ಕೂ ಬಂದಿದ್ದಾಳೆಯೆ? ಅದೂ ಹೇಳದೆ ಕೇಳದೆ? ಬೆಳಿಗ್ಗೆ ಒಂಬತ್ತೂವರೆಯವರೆಗೂ ವಾಟ್ಸ್‌ಆ್ಯಪಿನಲ್ಲಿ ಸಂವಹಿಸುತ್ತಿದ್ದವಳು, ಬರುತ್ತಿರುವೆನೆಂಬ ಸುಳುಹು ಸಹಿತ ತೋರದವಳು – ಈಗ, ಇದ್ದಕ್ಕಿದ್ದಂತೆ ಬೆಂಗಳೂರಿನಲ್ಲಿದ್ದೇನೆ ಅಂದರೆ?!

ನಿಸ್ಸಂದೇಹ ಸಂದೇಹಿಸಿದೆ.

'ಡೋಂಟ್ ಬಿ ಕಿಡಿಂಗ್!...' ಎಡಗೈಯಲ್ಲೇ ಕೀಲಿಸಿ ಕಳಿಸಿದೆ. 'ಸೆಂಡ್' ಒತ್ತುವಾಗಲೂ ಏನೋ ಅಳುಕು. ಮನಸೇ ಛಳುಕಿತೋ ಹೇಗೆ?!

ಕಂಡು ಗೊತ್ತಿರದ ಪರವೂರಿನಲ್ಲಿ ಭೇಟಿ ಮಾಡುವುದೇ ಬೇರೆ ಸಂಗತಿ... ಅದಕ್ಕೆ ಅಪರದ್ದೇ ಆಯಾಮ! ಅಪರಿಚಿತ ಜಗತ್ತು. ಭಿಡೆಯಿರದೆ ಇರಬಹುದು... ಬೇಕಾದ್ದು ಮಾಡಬಹುದು... ಬೇಕಾದಂತೆ ಇರಬಹುದು... ಹೌದು... ದೆಹಲಿಯ ಜನಪಥದ ಬದಿಹಾದಿಗಳಲ್ಲಿ ಲಲ್ಲೆ ಹೊಡೆದುಕೊಂಡು ಸುತ್ತಿದಂತೆ, ಇಲ್ಲಿ ವಿಧಾನಸೌಧದೆದುರು ಮಾಡಲಾದೀತೆ? ಕನಾಟ್‌ಪ್ಲೇಸ್‌ನಲ್ಲಿ ಇವಳ ಸೊಂಟ ಬಳಸಿಕೊಂಡು ಅಡ್ಡಾಡುವಾಗ, ಕ್ಯಾರೇ ಅನ್ನುವ ನೋಟಗಳೆಷ್ಟು ದಕ್ಕಿಯಾವು? ಅದನ್ನೇ ಇಲ್ಲಿ ಬ್ರಿಗೇಡ್ ರೋಡಿನಲ್ಲಿ ಮಾಡುವುದುಂಟೆ? ಇಲ್ಲಿ ಆ ರಾಜಾರೋಷ ತೋರುವುದುಂಟೆ? ಇಲ್ಲಿನ ರಸ್ತೆಬದಿಯ ಗೋಡೆಗಳಲ್ಲೂ ಕಣ್‌ಕಿವಿಯಿದ್ದಾವು... ನೋಡುವಷ್ಟೇ ಕೇಳಿಸಿಕೊಳ್ಳುವ ಕುತೂಹಲವೂ ಇದ್ದಾವು... ಹುಹ್ಞ್... ಗೊತ್ತಿರುವ ಊರೆಂದರೆ ಹೀಗೇ... ಸ್ವಸ್ಥಳದಲ್ಲಿ ಮುಲಾಜಿಟ್ಟುಕೊಂಡೇ ಇರುವುದಾಗುವುದು. ಭೂಮಿ ಹೇಳುವ ಹಾಗೆ – ಸೋಗಿಗಾದರೂ ಸರಿಯೆ, ಗಾಂಭೀರ್ಯ ತಾಳಿ ನಡೆವುದಾಗುವುದು... ಹೀಗಿರುವಾಗ –ಹುಟ್ಟಿ ಬೆಳೆದುದಲ್ಲದೆ, ಊರೊಡನೆಯೇ ಸಂಸಾರ ಬೆಸೆದುಕೊಂಡ ಊರಿನಲ್ಲಿ 'ಸಿಗು' ಅನ್ನುತ್ತಾಳಲ್ಲ?! ಹೀಗೆ ಸುಖಾಸುಮ್ಮನೆ 'ಸಿಗಲಿಕ್ಕೆ' ಏನೆಲ್ಲ ತಯಾರಿ ಬೇಕಷ್ಟೆ? ಏನೆಲ್ಲ ದಾಕ್ಷಿಣ್ಯ ನಿಭಾಯಿಸುವುದಾಗುವುದು... ಆಫೀಸಿನಲ್ಲಿ ಸೆಕ್ರೆಟರಿಗೆ ಏನು ತಿಳಿಸುವುದು? ಎದುರು ನೋಡುತ್ತಿರುವ ಕ್ಲಯಂಟುಗಳಿಗೆ ಏನನ್ನುವುದು? ಮನೆಯಲ್ಲಿ ಭೂಮಿಗೇನು ಹೇಳುವುದು? ದಿಶಾಳಿಗೇನು ಹೇಳುವುದು? ಇನ್ನು, ಈ ಭೂಮಿಗೋ ಅವಳ ಕಾಲ್ಲುದಿಗಿರುವುದು ಪಾದವಲ್ಲ, ಚಕ್ರ... ದಿನವೆಲ್ಲ ಅಲ್ಲಿಲ್ಲಿ ಶಾಪಿಂಗ್ ಅಂತ ಸುತ್ತುತ್ತಲೇ ಇರುತ್ತಾಳೆ. ಇಲ್ಲಾ, ಗೆಳತಿಯರನ್ನು ಕಟ್ಟಿಕೊಂಡು ಔಟಿಂಗು... ಅವಳ ಕಣ್ಣಿಗೇನಾದರೂ ಈ ಸಂಗತಿಯು ತೋರಿಕಂಡರೆ? ಅಥವಾ ಕಿವಿಗೆ ಬಿದ್ದರೆ? ಛೇ... ಈಗೇನು ಮಾಡುವುದು?!

ಅಳುಕೇ ಮುಂದಾಯಿತು... ದೇವರೇ... ಬರೇ ತಮಾಷೆಯಿರಲಪ್ಪಾ... ಎಂದು ಮನಸು